## <u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯ, ನಂಜನಗೂಡು</u>

**ಸಿಸಿ ಸಂಖ್ಯೆ: 8952/2022**

**ಫಿರ್ಯಾದುದಾರರು** : ಶ್ರೀಮತಿ. ಕುಮಾರಿ
ಕೋಂ ಲೇಟ್ ಮುದ್ದುಮಹದೇವನಾಯಕ ,
ವಯಸ್ಸು ಸುಮಾರು 57 ವರ್ಷಗಳು
ವಾಸಃ ಮನೆ ಸಂಖ್ಯೆ-28, ಚಿಕ್ಕಯ್ಯನಛತ್ರ ಹೋಬಳಿ,
ನಂಜನಗೂಡು ತಾಲ್ಲೂಕು.

ವಿರುದ್ಧ

**ಆರೋಪಿ** : ಶ್ರೀಮತಿ ಅನುಷ

:: **<u>ಆಪಾದನೆ</u>** ::

**ಶ್ರೀ ಸತೀಶ. ಕೆ.ಜಿ. ಬಿ.ಎ., ಎಲ್.ಎಲ್.ಬಿ.,** ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು., ನಂಜನಗೂಡು ಆದ ನಾನು ಆರೋಪಿಯಾದಃ-

ಶ್ರೀಮತಿ. ಅನುಷ
ಕೋಂ ಸತ್ಯನಾರಾಯಣ ರಾವ್ ,
ವಯಸ್ಸು ಸುಮಾರು 34 ವರ್ಷಗಳು
ವಾಸಃ ಹೊಸ ಮಾರುತಿ ಬಡಾವಣೆ ,
ಹೊಸ ಕೇಂಬ್ರಿಡ್ಜ್ ಪಬ್ಲಿಕ್ ಶಾಲೆ ಹತ್ತಿರ ,
ಹುಣಸೂರು ಪಟ್ಟಣ - 571 105.

ಈ ಮೇಲ್ಕಂಡ ನಿವಾಸಿಯಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆಃ-

ಫಿರ್ಯಾದುದಾರರು ಹಾಗು ಆರೋಪಿಯಾದ ನೀವು ಪರಿಚಯಸ್ಥರಾಗಿದ್ದು, ಆರೋಪಿಯಾದ ನೀವು ನಿಮ್ಮ ಕಾನೂನುಬದ್ದ ಅವಶ್ಯಕತೆಗಾಗಿ ಫಿರ್ಯಾದುದಾರರಿಂದ ದಿನಾಂಕ 01/09/2021 ರಂದು ರೂ.3,00,000/- ಹಣವನ್ನು ಸಾಲವಾಗಿ ಪಡೆದುಕೊಂಡಿದ್ದು, ಸದರಿ ಸಾಲದ ಹಣವನ್ನು ಮರುಪಾವತಿ ಮಾಡುವ ಸಲುವಾಗಿ ಆರೋಪಿಯಾದ ನೀವು ಬ್ಯಾಂಕ್

ಆಫ್ ಬರೋಡ, ಹುಣಸೂರು ಶಾಖೆಯ ಚೆಕ್ ನಂ.004174 ನಂಬರಿನ ರೂ.3,00,000/- ಹಣಕ್ಕೆ ದಿನಾಂಕ 05/09/2022 ಎಂದು ನಮೂದಿಸಿದ ಚೆಕ್ ನ್ನು ನೀಡಿದ್ದು, ಪಿರ್ಯಾದುದಾರರು ಸದರಿ ಚೆಕ್ ನ್ನು ನಗದೀಕರಣಕ್ಕಾಗಿ ನಂಜನಗೂಡಿನ ಚಿಕ್ಕಯ್ಯನಛತ್ರ ಶಾಖೆಯ ಕೆನರಾ ಬ್ಯಾಂಕ್‌ನಲ್ಲಿ ದಿನಾಂಕ 05/09/2022 ರಂದು ಹಾಜರುಪಡಿಸಿದಾಗ, ನಿಮ್ಮ ಖಾತೆಯಲ್ಲಿ "**ಸಾಕಷ್ಟು ಹಣವಿಲ್ಲ**" ಎಂಬ ಹಿಂಬರಹದೊಂದಿಗೆ ದಿನಾಂಕ 06/09/2022 ರಂದು ಮಾನ್ಯವಾಗದೆ ವಾಪಸ್ಸಾಗಿರುತ್ತದೆ.

ನಂತರ ಫಿರ್ಯಾದಿಯು ತಮ್ಮ ವಕೀಲರ ಮೂಲಕ ದಿನಾಂಕ 17/09/2022 ರಂದು ನೊಂದಾಯಿತ ಅಂಚೆ ಮೂಲಕ ನೋಟಿಸ್ ಕಳುಹಿಸಿದ್ದು, ಸದರಿ ನೋಟಿಸನ್ನು ಆರೋಪಿಯಾದ ನೀವು ಪಡೆದುಕೊಂಡಿರುವುದಿಲ್ಲ ಹಾಗು ಚೆಕ್ ನ ಹಣವನ್ನು ಮರುಪಾವತಿ ಮಾಡಿರುವುದಿಲ್ಲ, ಆ ಮೂಲಕ ಲಿಖಿತ ವರ್ಗಾವಣೀಯ ಅಧಿನಿಯಮ ಕಲಂ 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಪ್ರಶ್ನೆ: 1- ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೆ ?

ಆರೋಪಿ ಉತ್ತರ :

ಪ್ರಶ್ನೆ: 2 ಸದರಿ ಆಪಾದನೆಗಳನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆಯಾಗಬೇಕೋ?

ಆರೋಪಿ ಉತ್ತರ :

(ಮೇಲಿನ ಆಪಾದನೆಯನ್ನು ಆರೋಪಿಗೆ ನನ್ನ ಸಮಕ್ಷಮದಲ್ಲಿ ಓದಿ ಹೇಳಿ, ಆರೋಪಿ ಕೊಟ್ಟ ಉತ್ತರವನ್ನು ದಿನಾಂಕ 24.01.2025 ರಂದು ತೆರೆದ ನ್ಯಾಯಾಲಯದಲ್ಲಿ ಬರೆದುಕೊಂಡಿರುತ್ತೇನೆ)

(ಸತೀಶ. ಕೆ.ಜಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ನಂಜನಗೂಡು.